

ಚಿತ್ರ: ತಾಜುದ್ದೀನ್ ಆಜಾದ್

ಇನ್ನೊಂದಷ್ಟು ದುಡ್ಡು ಮಾಡ್ಕೊಳ್ಳಹುದು. ಜನಕ್ಕೂ ಕೂಡ ಭ್ರಮೆ. ಇಂಟರ್‌ನ್ಯಾಷನಲ್ ಸ್ಕೂಲ್ ಅಂದ್ರೆ ಸಾಕು ಓ ಅಂತ ಓಡ್ಕೊಂಡ್ ಹೋಗ್ತಾರೆ. ಈಗ ಪ್ರೈವೇಟ್ ಸ್ಕೂಲ್ಗಳು ಮೈನಾರಿಟಿ ಸ್ಟೇಟಸ್ ಕೊಡಿ ಅಂತ ಸರ್ಕಾರಕ್ಕೆ ಅರ್ಜಿ ಹಾಕ್ಕೊಳ್ತಾ ಇದ್ದಾರೆ. ಯಾಕಂದ್ರೆ ಆ ಮೈನಾರಿಟಿ ಸ್ಟೇಟಸ್ ಇದ್ರೆ ಈ ಆರ್‌ಟಿಇ ಶೇ. 25ರಷ್ಟು ಕೋಟ ಅನ್ವಯಿಸಲ್ಲ. ಬಡ ಮಕ್ಕಳಿಗೆ ಅಡ್ಮಿಷನ್ ಕೊಡೊ ತಲೆನೋವೂ ಇರಲ್ಲ. ಇಲ್ಲಿವರೆಗೂ 176 ಕಂಪ್ಲೇಂಟ್ ಕೊಟ್ಟಿದ್ದೀವಿ, ರಿಪ್ಲೈ ಇಲ್ಲ. ಕೋರ್ಟಿಗೆ ಹೋಗಿದ್ದೀವಿ.

ಈ ಕಡೆ ಸರ್ಕಾರ ಸರ್ಕಾರಿ ಶಾಲೆಯನ್ನ ಮುಚ್ಚಿಸೋದಕ್ಕೆ ಜೈ ಅನ್ನತ್ತೆ. ಆ ಕಡೆ ಸರ್ಕಾರೇತರ ಶಾಲೆ ತೆಗೆಯೋಕ್ಕೆ ಧಾರಾಳವಾಗಿ ಒಪ್ಪಿಕೊಳ್ಳತ್ತೆ. ಯಾವುದೇ ಪ್ರೈವೇಟ್ ಶಾಲೆಯಲ್ಲಿ ಒಂದು ಎಲ್‌ಕೆಜಿ ಮಗುವಿಗೆ ಅಬ್ಬಾಬ್ಬಾ ಅಂದ್ರೆ ಗರಿಷ್ಠ 20,000 ಅದೂ ಪೂರ್ತಿ ವರ್ಷಕ್ಕೆ ಖರ್ಚಾಗತ್ತೆ ಅಂತಿಟ್ಕೊಳ್ಳಿ. ಮಿಕ್ಕ ಸಾವಿರಗಳು, ಲಕ್ಷಗಳು ಎಲ್ಲಿವೆ? ಯಾರೂ ಆಡಿಟ್ ಕೊಡಲ್ಲ. ಒಟ್ನಾರೆ ಸ್ಕೂಲ್ ಅಡ್ಮಿಷನ್, ಶಿಕ್ಷಣ ಅಂದ್ರೆ ದಂಧೆ ಅಂತ ಆಗಿದೆ. ಹಾಗೆಂದು ಒಳ್ಳೆ ಶಾಲೆಗಳೂ ಇವೆ, ಶಾಂತಿಯಿಂದ, ಸೌಮ್ಯವಾಗಿ ತಮ್ಮಷ್ಟಕ್ಕೆ ತಾವು ಅತ್ಯುತ್ತಮ ಕೆಲಸ ಮಾಡ್ತಿವೆ. ಅವು ಸರಿಯಾಗಿ ಆರ್‌ಟಿಇ ಕೋಟ ತುಂಬಿಸಿ, ಬಡ ಮಕ್ಕಳು, ಅಂಗವಿಕಲತೆ ಹೊಂದಿದ ಮಕ್ಕಳು, ಎಲ್ಲರಿಗೂ ಸಮಾನತೆಯಿಂದ ಒಳ್ಳೆಯ ಶಿಕ್ಷಣವನ್ನ ನೀಡ್ತಾ ಇವೆ. ಅವರನ್ನ ನೋಡಿದ್ರೆ ನಾವು ಮಾಡುತ್ತಿರುವ ಈ ಆರ್‌ಟಿಇ ಕೆಲಸಕ್ಕೆ ಸ್ಫೂರ್ತಿ ಬರತ್ತೆ' ಎನ್ನುತ್ತಾರೆ ನಾಗಸಿಂಹ.

ಆ ಒಳ್ಳೆ ಶಾಲೆಗಳು ಬೇರೆಲ್ಲಾ ಶಾಲೆಗಳ ತರಹ ಅದೇ ಶಿಕ್ಷಣವನ್ನ ಮಕ್ಕಳಿಗೆ ಕೊಡ್ತಾ ಇವೆ. ಸಂತೋಷದಿಂದ, ಸಮಾನತೆಯಿಂದ, ಯಾವುದೇ ಭೇದಭಾವವಿಲ್ಲದೆ, ತಾರತಮ್ಯತೆಯಿಲ್ಲದೆ. ಅವಕ್ಕೆ ಅನಗತ್ಯವಾಗಿ ಹಣ ಮಾಡಿಕೊಳ್ಳುವ ಉದ್ದೇಶ ಇಲ್ಲ. ಪೋಷಕರಿಂದ ಹೆಚ್ಚುಹೆಚ್ಚು, ಇನ್ನೂ ಹೆಚ್ಚು ಹಣ ಪಡೆದರೆ ಮಾತ್ರ ಶಿಕ್ಷಣ ಕೊಡಲು ಸಾಧ್ಯ ಎಂಬ ಮಾತು ಸುಳ್ಳು ಎಂಬುದನ್ನು ಸಾಬೀತುಪಡಿಸಿ ಆ ಕೆಲವೇ ಶಾಲೆಗಳು ಉತ್ತಮ ಉದಾಹರಣೆಯಾಗಿ ನಿಂತಿವೆ.

ಮಗುವಿನ ಶಿಕ್ಷಣದಲ್ಲಿ – ಪ್ರಾಥಮಿಕವಾಗಲಿ, ಹೈಸ್ಕೂಲಾಗಲಿ – ಶಾಲೆಗಿಂತಲೂ ತಂದೆತಾಯಿಯರ ಪಾತ್ರ ಅತ್ಯಂತ ಮುಖ್ಯವಾದದ್ದು. ಖಾಸಗಿ ಶಾಲೆಯ ಸೀಟಿಗೆ ಅವರು ಕೇಳಿದಷ್ಟು ದುಡ್ಡು ಬಿಸಾಡಿ ಶಿಕ್ಷಣವನ್ನ ಕೊಂಡುಕೊಂಡು ಮಗುವಿನ ಶಾಲೆಯ ದ್ವಾರಪಾಲಕರಾಗಬೇಕೇ? ಶಾಲೆಯಾಚೆ ಮಗು ಕಲಿಯುವ ಬೇರೆ ಬೇರೆ ಚಟುವಟಿಕೆಗಳಲ್ಲಿ ಅಪ್ಪಅಮ್ಮಂದಿರು ಕೂಡ ಭಾಗವಹಿಸಿದರೆ ಅದೆಷ್ಟು ಸಂತೋಷವಿರುತ್ತದೆ! ಶಾಲೆಯ ಹೆಸರನ್ನು ನೋಡಿ ಲಕ್ಷಗಳು ಹರಿಯಬೇಕೇ ಅಥವಾ ಉತ್ತಮ ಶಿಕ್ಷಣ ಕೊಡುವ ನಿಟ್ಟಿನಲ್ಲಿ ನಾವು ಪ್ರಜೆಗಳಾಗಿ ಜಾಗೃತರಾಗಬೇಕೇ? ಶಿಕ್ಷಣ ಹೇಗೆ ಮಗುವಿನ ಮೂಲಭೂತ ಹಕ್ಕೋ ಅಷ್ಟೇ ಮುಖ್ಯವಾದದ್ದು ಆ ಮಗು ಅಡೆತಡೆಯಿಲ್ಲದೆ, ತನ್ನ ಕಲಿಕೆಯನ್ನು ಆನಂದದಿಂದ ಅನುಭವಿಸುವುದು. ಫೀಸ್, ಡೊನೇಷನ್ ಎಂದು ಚಕ್ರವ್ಯೂಹದಲ್ಲಿ ಇಡೀ ಸಂಸಾರ ಸಿಕ್ಕಿಕೊಂಡು ನರಳಿದರೆ ಅದರ ಪರಿಣಾಮ ಎಲ್ಲರ ಮೇಲೂ ಆಗುತ್ತದೆ.

ಶಿಕ್ಷಣವೆನ್ನುವುದು ಒಂದು ತ್ರಿಕೋನದಂತೆ – ಶಾಲೆ, ಪೋಷಕರು, ಮತ್ತು ಮಗು ಆ ತ್ರಿಕೋನ. ಒಂದು ಮಗುವನ್ನ ಶಿಕ್ಷಿತವನ್ನಾಗಿ ಮಾಡಬೇಕೆಂದರೆ ಆ ಪ್ರಕ್ರಿಯೆಯಲ್ಲಿ ಇಡೀ ಸಮುದಾಯದ ಪಾತ್ರ ಮಹತ್ತರವಾದದ್ದು. ಅದರಲ್ಲಿ ಭಾಗವಹಿಸುವ ಕರ್ತವ್ಯ ಮಗುವಿನ ತಂದೆತಾಯಿಯರದ್ದು. ಆ ಭಾಗವಹಿಸುವಿಕೆಗೆ ನಾವು ಚಾಲನೆ ಕೊಟ್ಟರೆ ಶಾಲೆಗೆ ಕೂಡ ಎಷ್ಟೋ ಲಾಭವಿದೆ. ಶಾಲೆಗಳಿಗೆ ತಮಗಿರುವ ಹೊಣೆಗಾರಿಕೆಯ ಅರಿವು ಹೆಚ್ಚುತ್ತದೆ. ಆಗ ಈ ಅಡ್ಮಿಷನ್ ಭೂತ ನಮ್ಮನ್ನು ಈಗಿನಷ್ಟು ಕಾಡುವುದಿಲ್ಲ. ದುಡ್ಡು ಕೊಟ್ಟು ಮಾರುಕಟ್ಟೆಯ ಸರಕಿನಂತೆ ಶಿಕ್ಷಣವನ್ನು ಕೊಳ್ಳುವ ಅಥವಾ ಮಾರುವ ತಪ್ಪು ಪದ್ಧತಿಗೆ ತಡೆ ಬೀಳುತ್ತದೆ. ನಮ್ಮ ಸಕ್ರಿಯ ಭಾಗವಹಿಸುವಿಕೆಯಿಂದ ನಮ್ಮ ಮಗು ಕೂಡ ಶಾಲೆಯನ್ನು ಒಂದು ಶಿಕ್ಷೆ ಎಂಬಂತೆ ಅನುಭವಿಸುವುದು ತಪ್ಪುತ್ತದೆ. ಕಲಿಕೆಯ ಆನಂದ, ಹರ್ಷ ಹೆಚ್ಚುತ್ತದೆ. ನಮ್ಮ ಮಗುವಿನ ಶಾಲೆ ನಮ್ಮದೂ ಕೂಡ ಎಂಬುದನ್ನು ನಾವು ಮರೆಯಬಾರದು.

**(ಲೇಖಕಿ ಶಿಕ್ಷಣ ತಜ್ಞರು ಮತ್ತು ಸಂಶೋಧಕಿ)**

## ಮೇಲ್ವಿಚಾರಣೆ ಬೇಕು

**-ಕೃಪಾ ಆಳ್ವ**
**ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಅಧ್ಯಕ್ಷೆ**



ನರ್ಸರಿ ಶಾಲೆಗಳು ನಾಯಿಕೊಡೆಗಳಂತೆ ತಲೆ ಎತ್ತುತ್ತಿದ್ದವು. ಸ್ವೇಚ್ಛಾಚಾರದಿಂದ ವರ್ತಿಸುತ್ತಿದ್ದವು. ಅವುಗಳ ನಿಯಂತ್ರಣ ವ್ಯವಸ್ಥೆ ಇರಲಿಲ್ಲ. ಈ ಶಾಲೆಗಳನ್ನು ನೋಂದಣಿ ಮಾಡಿಸಬೇಕು ಎಂದು ಸಾರ್ವಜನಿಕ ಶಿಕ್ಷಣ ಇಲಾಖೆ ಇತ್ತೀಚೆಗೆ ಆದೇಶ ಹೊರಡಿಸಿದೆ. ಇದು ಸಕಾರಾತ್ಮಕ ಬೆಳವಣಿಗೆ. ಇದಿಷ್ಟೇ ಸಾಲದು. ಅವುಗಳ ಮೇಲ್ವಿಚಾರಣೆಗೆ ವ್ಯವಸ್ಥೆ ಬೇಕು. ಅವುಗಳ ಕಾರ್ಯಚಟುವಟಿಕೆ ಮೇಲೆ ನಿಗಾ ವಹಿಸಲು ನಿಯಮ ರೂಪಿಸಬೇಕು. ಅದಕ್ಕೆ ಹೆಚ್ಚುವರಿ ಸಿಬ್ಬಂದಿಯನ್ನು ಒದಗಿಸಬೇಕು.

ಶಾಲೆಗಳನ್ನು ಮನೆಯಷ್ಟೇ ಸುರಕ್ಷಿತ ಸ್ಥಳ ಎಂಬ ನಂಬಿಕೆ ನಮಗಿದೆ. ಇತ್ತೀಚಿನ ವರ್ಷಗಳಲ್ಲಿ ನಡೆಯುತ್ತಿರುವ ಈ ನಂಬಿಕೆಯನ್ನು ಸುಳ್ಳಾಗಿಸುತ್ತಿದೆ. ಪುಟ್ಟ ಮಕ್ಕಳ ಮೇಲೆ ದೌರ್ಜನ್ಯ ಪ್ರಕರಣಗಳು ಹೆಚ್ಚುತ್ತಿವೆ. ಸುರಕ್ಷತಾ ಕ್ರಮಗಳನ್ನು ಕೈಗೊಳ್ಳದೆ ಇರುವುದು ಇದಕ್ಕೆ ಕಾರಣ. ಇದು ಮಾಲೀಕರ ನಿರ್ಲಕ್ಷ್ಯಕ್ಕೆ ಸಾಕ್ಷಿ. ಹಣ ಮಾಡುವ ಏಕೈಕ ಉದ್ದೇಶ ಅವರ ಮುಂದೆ ಇರುತ್ತದೆ. ಇದು ಎಲ್ಲ ಅವಘಡಗಳಿಗೆ ಕಾರಣವಾಗುತ್ತಿದೆ. ಮಕ್ಕಳ ಸುರಕ್ಷತಾ ವ್ಯವಸ್ಥೆ ಅಳವಡಿಸದ ಸಂಸ್ಥೆಗಳ ಮಾನ್ಯತೆ ರದ್ದುಪಡಿಸಬೇಕು. ಈ ವಿಷಯದಲ್ಲಿ ಪ್ರಭಾವಗಳಿಗೆ ಮಣಿಯದೆ ಕಠಿಣ ಕ್ರಮ ಕೈಗೊಳ್ಳಬೇಕು.